**ಅಸಲು ದಾವ ಸಂಖ್ಯೆಃ 875/2022**
**ಪಿ.ಡಬ್ಲೂ -1**

**ದಿಃ 09-12-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ **Smt. JSB** ರವರಿಂದಃ-

1. ದಾವಾ ಸ್ವತ್ತು ನಮ್ಮ ತಂದೆಗೆ ಸೇರಿದ ಸ್ವತ್ತಾಗಿರುತ್ತದೆ. ನನ್ನ ತಂದೆ ಬದುಕಿರುತ್ತಾರೆ. ನನ್ನ ತಂದೆಯವರು ದಾವಾ ಸ್ವತ್ತನ್ನು ನನ್ನ ಹೆಸರಿಗೆ ಹೇಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಸುಮಾರು 30 ವರ್ಷಗಳಿಂದ ಬರುತ್ತಿದೆ. ಸರ್ವೆ ನಂಬರ 56 ಮೊದಲು ನನ್ನ ತಂದೆ ಹಾಗೂ ಅವರ ಸಹೋದರರ ಜಂಟಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸರ್ವೆ ನಂಬರ 56/7 ರಲ್ಲಿ ಪಕಿರಪ್ಪ ಬಸವಂತಪ್ಪ ಕರವಿನಕೊಪ್ಪ, ಬಸವರಾಜ ಬಸವಂತಪ್ಪ ಕರವಿನಕೊಪ್ಪ, ಪರಪ್ಪ ಈರಪ್ಪ ಕರವಿನಕೊಪ್ಪ ಹಾಗೂ ಆನಂದ ಬಸವಣ್ಣೆ ಕರವಿನಕೊಪ್ಪ ಎಂದರೆ ನಾನು, ನಮ್ಮೆಲ್ಲರ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುತ್ತದೆ. ಸರ್ವೆ ನಂಬರ 56 ಹಿಸ್ಸಾ ನಂಬರ 7 ಒಟ್ಟು 32 ಗುಂಟೆ ಇತ್ತು. ಮೊದಲು ಸದರಿ 32 ಗುಂಟೆಯಲಿ ಪ್ರತಿವಾದಿಯರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸರ್ವೆ ನಂಬರ 56/7 ರ ಪೂರ್ಣ 32 ಗುಂಟೆಯ ಚೆಕ್ಕಬಂದಿ ಹೇಳಬಲ್ಲೆ, ಉತ್ತರಕ್ಕೆ ವೀರಬದ್ರಪ್ಪ ಅಕ್ಕಿ, ದಕ್ಷಿಣಕ್ಕೆ ವೀರಬದ್ರಪ್ಪ ಅಕ್ಕಿ ರವರ ಜಮೀನು, ಪೂರ್ವಕ್ಕೆ ರಾಮಪ್ಪ ಲಂಗೋಟಿ ರವರ ಜಮೀನು ಹಾಗೂ ಪಶ್ಚಿಮಕ್ಕೆ ಬಾಬು ಪರಪ್ಪ ಕರವಿನಕೊಪ್ಪ ರವರ ಜಮೀನು ಇರುತ್ತದೆ. ಸರ್ವೆ ನಂಬರ 56/7 ನ್ನು ಹೊರತುಪಡಿಸಿ ನಮ್ಮ ಕುಟುಂಬದ ಬೇರೆ ಆಸ್ತಿಗಳು ಇರುತ್ತವೆ. ಅವುಗಳೆಂದರೆ ಸರ್ವೆ ನಂಬರ 56/1, 56/4, 56/10, 56/13, 56/15, 56/16, 56/17 ಆಗಿರುತ್ತವೆ. ಸರ್ವೆ ನಂಬರ 56/12 ರ ಪಹಣಿ ಪತ್ರದಲ್ಲಿ ನನ್ನ ಹೆಸರು ಇರುವುದಿಲ್ಲ. ನನ್ನ ವಾದಪತ್ರದಲ್ಲಿ ವಂಶವೃಕ್ಷ ನಮೂದು ಮಾಡುವಲ್ಲಿ ನಾಗಪ್ಪ ಎಂದು ಬರೆದಿದ್ದು, ಸದರಿ ನಾಗಪ್ಪ ರವರು ನನ್ನ ಚಿಕ್ಕಪ್ಪ ಆಗಿರುತ್ತಾರೆ. ನಾಗಪ್ಪ ರವರು

ಮರಣಹೊಂದಿರುತ್ತಾರೆ. ನಾಗಪ್ಪ ರವರು ಸುಮಾರು 25 ವರ್ಷಗಳ ಹಿಂದೆ ಮರಣಹೊಂದಿರುತ್ತಾರೆ. ನಾಗಪ್ಪ ರವರ ಹೆಂಡತಿ ಹಾಗೂ ಒಬ್ಬ ಮಗಳು ಇರುತ್ತಾರೆ. ಅವರು ನಮ್ಮ ಊರಿನಲ್ಲಿ ವಾಸವಿರುವುದಿಲ್ಲ. ನಾಗಪ್ಪ ರವರ ಹೆಂಡತಿ ಮತ್ತು ಮಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾಗಪ್ಪ ರವರ ಹೆಂಡತಿ ಕಮಲವ್ವ ಹಾಗೂ ಮಗಳು ಸುವರ್ಣ ರವರು ನಮ್ಮ ವಿರುದ್ಧ ಕುಟುಂಬದ ಆಸ್ತಿಗಳಲ್ಲಿ ವಿಭಾಗ ಬೇಕು ಎಂದು ಒಂದು ದಾವೆ ಹೂಡಿದ್ದರು. ಸದರಿ ದಾವೆಯ ಕುರಿತು ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಆದರೆ ಅದರ ಅವಶ್ಯಕತೆ ಇರಲಿಲ್ಲ ಎಂದು ಹಾಜರುಪಡಿಸಿರುವುದಿಲ್ಲ. ನಿಪಿ-4 ರ ವಾಟ್ನಿ ಪತ್ರ ನಾನು ನೋಡುತ್ತಿದ್ದೇನೆ, ನಿಪಿ-4 ರಲ್ಲಿ ಪಕ್ಷಗಾರರಿರುವ ಪಕೀರಪ್ಪ ಹಾಗೂ ಬಸವರಾಜ ರವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಿಪಿ-4 ರ ಬಾಂಡ್ ಪ್ರಕಾರ ಸದರಿಯವರೂ ಸಹ ಆಸ್ತಿಗೆ ಹಕ್ಕುದಾರರು ಇರುತ್ತಾರೆ ಎಂದರೆ ಸರಿ. ನಿಪಿ-4 ರಂತೆ ಬಾಂಡ್ ಗಳನ್ನು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮಾಡಿರುತ್ತೇವೆ. ನಾನು ಮೇಲೆ ಹೇಳಿರುವ ಎಲ್ಲಾ ಸರ್ವೆ ನಂಬರ ಜಮೀನುಗಳಿಗೆ ಸಂಬಂಧಪಟ್ಟಂತೆ ಆ ರೀತಿ ಬಾಂಡ್ ಇರುತ್ತವೆ. ಸದರಿ ಸರ್ವೆ ನಂಬರ ಜಮೀನುಗಳಿಗೆ ಸಂಬಂಧಪಟ್ಟಂತೆ ಇರುವ ಬಾಂಡ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಬಾಂಡ್ ಗಳು ಬೇರೆ ಬೇರೆಯವರ ಹತ್ತಿರ ಇರುತ್ತವೆ. ಕುಟುಂಬದ ಜಮೀನುಗಳಿಗೆ ಸಂಬಂಧಪಟ್ಟಂತೆ ವಿಭಾಗವಾದರೆ ಎಲ್ಲಾ ಜಮೀನುಗಳಿಗೆ ಸಂಬಂಧಪಟ್ಟಂತೆ ವಾಟ್ನಿ ಪತ್ರ ಮಾಡಲಾಗುತ್ತದೆ ಎಂದರೆ ಸರಿ. ಮೇಲೆ ಹೇಳಿದ ಸರ್ವೆ ನಂಬರ ಜಮೀನುಗಳ ಪಹಣಿ ಪತ್ರಿಕೆಗಳನ್ನು ನಾನು ಈ ದಾವೆಯಲ್ಲಿ ಹಾಜರಪಡಿಸಿರುವುದಿಲ್ಲ. ವಾಟ್ನಿ ಪತ್ರಗಳ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಇನ್ನೂ ಸಹ ಹಕ್ಕು ಬದಲಾವಣೆ ಆಗಿ ಹೆಸರು ನಮೂದಾಗಿರುವುದಿಲ್ಲ. ನಾಗಪ್ಪ ರವರ ಹೆಂಡತಿ ಕಮಲವ್ವ ಹಾಗೂ ಅವರ ಮಗಳು ಸುವರ್ಣ ರವರು ಹೂಡಿದ ದಾವೆಯಲ್ಲಿ ಕುಟುಂಬದ ಎಲ್ಲಾ ಆಸ್ತಿಗಳನ್ನು ನಮೂದು ಮಾಡಿದ್ದರು ಎಂದರೆ

ಸರಿ. ಕುಟುಂಬದ ಎಲ್ಲಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಆ ಸಮಯದಲ್ಲಿ ನನ್ನ ಹೆಸರು ನಮೂದಾಗಿತ್ತು. ವಾಟ್ನಿ ಪತ್ರದ ಪ್ರಕಾರ ಸರ್ವೆ ನಂಬರ 56/7 ರಲ್ಲಿ ನನಗೆ 7 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ 7 ಗುಂಟೆ ಜಮೀನು ಈಗ ಪ್ರತಿವಾದಿಯ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ಕಬ್ಜೆಯಲ್ಲಿ ಇರುತ್ತದೆ ಎಂದುನುಡಿಯುತ್ತಾರೆ. ದಾವಾ ಸ್ವತ್ತಾದ 7 ಗುಂಟೆ ಜಮೀನಿನ ಕಬ್ಜೆ ಮೊದಲಿನಿಂದ ಪ್ರತಿವಾದಿಯ ಕಡೆಗೆ ಇತ್ತು ಹಾಗೂ ಈಗಲೂ ಸಹ ಅವರೇ ಅದರಲ್ಲಿ ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ 7 ಗುಂಟೆ ಜಮೀನು ಈಗ ಸರ್ವೆ ನಂಬರ 56/4 ಆಗಿರುತ್ತದೆ ಎಂದರೆ ಸರಿ. ಸದರಿ 7 ಗುಂಟೆ ಜಮೀನಿನ ಕಬ್ಜೆಯಲ್ಲಿ ನಾನೇ ಇರುತ್ತೇನೆ ಎಂದು ತೋರಿಸಲು ನಾನು ಗ್ರಾಮ ಲೆಕ್ಕಾಧಿಕಾರಿಯಿಂದ ಯಾವುದೇ ಪ್ರಮಾಣ ಪತ್ರ ಪಡೆದಿರುವುದಿಲ್ಲ. ವಾಟ್ನಿ ಪತ್ರದ ಪ್ರಕಾರ ಸರ್ವೆ ನಂಬರ 56/7 ರಲ್ಲಿ ಪ್ರತಿವಾದಿಯು 7 ಗುಂಟೆ ನನಗೆ ಬಿಟ್ಟುಕೊಡಬೇಕು ಹಾಗೂ ಪಕೀರಪ್ಪ ಮತ್ತು ಬಸವಂತಪ್ಪ ರವರು 7 ಗುಂಟೆ ಜಮೀನನ್ನು ಪ್ರತಿವಾದಿಗೆ ಬಿಟ್ಟುಕೊಡಬೇಕು ಎಂದರೆ ಸರಿಯಲ್ಲ. ನಂತರ ವಾಟ್ನಿ ಪತ್ರವನ್ನು ರದ್ದುಗೊಳಿಸಿ ಬಾಯಿಮಾತಿನಲ್ಲಿ ಪಕೀರಪ್ಪ ಹಾಗೂ ಬಸವರಾಜ ರವರು ನನಗೆ 7 ಗುಂಟೆ ಜಮೀನು ಬಿಟ್ಟುಕೊಡಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಿಪಿ-4 ರ ಬಾಂಡ್ ಪ್ರಕಾರ ನಾನು ನನ್ನ 7 ಗುಂಟೆ ಜಮೀನನ್ನು ಸರ್ವೆ ಮಾಡಿಸಲು ಹೋಗಿದ್ದೆ ಆದರೆ ಅದು ಪೂರ್ಣಗೊಂಡಿಲ್ಲ. ಸದರಿ ಸರ್ವೆ ಕಾರ್ಯ ಮಾಡಲು ಸರ್ಕಾರಿ ಅಧಿಕಾರಿಗಳು 2011-12 ರಲ್ಲಿ ಬಂದಿದ್ದರು ಹಾಗೂ ಆಗ ಸರ್ವೆ ಕಾರ್ಯ ಆಗಿರುತ್ತದೆ. ಆದರೆ ಇತ್ತೀಚೆಗೆ ಪ್ರತಿವಾದಿ ತಕರಾರು ಮಾಡಿರುತ್ತಾರೆ. ಪ್ರತಿವಾದಿಯು ಸರ್ವೆ ಕಾರ್ಯಕ್ಕೆ 2022 ನೇ ಇಸವಿಯಲ್ಲಿ ತಕರಾರು ಮಾಡಿರುತ್ತಾರೆ. 2011-12 ರಲ್ಲಿ ಸರ್ವೆ ನಂಬರ 60 ಮತ್ತು 36 ಜಮೀನುಗಳನ್ನು ಸರ್ವೆ ಕಾರ್ಯ ಮಾಡಿ ಅಳತೆ ಮಾಡಲಾಗಿತ್ತು. ಆ ಸಮಯದಲ್ಲಿ ಬೇರೆ ಜಮೀನುಗಳ ಕುರಿತು ವಾಟ್ನಿ ಪತ್ರ ಆಗಿತ್ತು ಆದರೆ ಹಕ್ಕು ಬಿಡುಗಡೆ ಪತ್ರ ಆಗಿರಲಿಲ್ಲ ಆದ್ದರಿಂದ ಬೇರೆ ಜಮೀನುಗಳ ಸರ್ವೆ ಕಾರ್ಯ ಆಗ ಆಗಿರುವುದಿಲ್ಲ. ನಿಪಿ-4 ರ ವಾಟ್ನಿ ಪತ್ರದ ಬಾಂಡನ್ನು ನಾವು 2011-12 ರಲ್ಲಿ

ಮಾಡಿಕೊಂಡಿರುತ್ತೇವೆ. ದಾವಾ ಸ್ವತ್ತಿನಲ್ಲಿ ನಾನು ಬೆಳೆ ಬೆಳೆಯುತ್ತಿರುವ ಬಗ್ಗೆ ನಾನು ಛಾಯಾ ಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ.

2. ಎಲ್ಲಾ ಜಮೀನುಗಳ ಕುರಿತು ಒಂದೇ ವಾಟ್ನಿ ಪತ್ರ ಏಕೆ ಆಗಿರುವದಿಲ್ಲ ಎಂದರೆ ಸಾಕ್ಷಿ ಸರ್ವೆ ನಂಬರ 60 ಮತ್ತು 36 ರ ಕುರಿತು ಒಂದು ವಾಟ್ನಿ ಪತ್ರ ಹಾಗೂ ಸರ್ವೆ ನಂಬರ 56 ರ ಕುರಿತು ಬೇರೆ ಬೇರೆ ವಾಟ್ನಿ ಪತ್ರಗಳಾಗಿರುತ್ತವೆ ಏಕೆಂದರೆ ನಾಲ್ಕು ಜನರ ಹೆಸರಿಗೆ ನಾಲ್ಕು ಬಾಂಡಗಳು ಆಗಿರುತ್ತವೆ. ಸರ್ವೆ ನಂಬರ 56/7 ರ ಜಮೀನಿಗೆ ಸಂಬಂಧಿಸಿದಂತೆ ಮಾತ್ರ ವಾಟ್ನಿ ಪತ್ರ ಇರುತ್ತದೆ ಹಾಗೂ ಬೇರೆ ಜಮೀನುಗಳಿಗೆ ಸಂಬಂಧಪಟ್ಟಂತೆ ಕೇವಲ ಹಕ್ಕು ಬಿಡುಗಡೆ ಪತ್ರಗಳಾಗಿರುತ್ತವೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**